# ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

ಸಿ.ಸಿ. ನಂ.149/2022

ಸಿ.ಡಬ್ಲ್ಯೂ 5, ಪಿ.ಡಬ್ಲ್ಯೂ 3

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸತೀಶ ಬಾಬಣಿ ನಾಗೇಕರ್ |
| **ತಂದೆಯ ಹೆಸರು** | : | ಬಾಬಣಿ ನಾಗೇಕರ್ |
| **ವಯಸ್ಸು** | : | 43 ವರ್ಷ |
| **ಉದ್ಯೋಗ** | : | ಆಟೋ ಚಾಲಕ |
| **ವಾಸ** | : | ಕಾರವಾರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 27-03-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಅದು ಜಪ್ತು ಪಂಚನಾಮೆ ಇದ್ದು, ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-8ಕ್ಕೆ ದಿ.28-11-2019 ರಂದು ಚಾಸಾ-11 ರವರು ನನ್ನ ಆಟೋದಲ್ಲಿ ಕಾರವಾರದ ಬಂದರು ರಸ್ತೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಒಂದು ಬಸ್ಸನ್ನು ತಡೆಹಿಡಿದು 3 ಜನರನ್ನು ದಸ್ತಗಿರಿ ಮಾಡಿದ್ದರು. ಆಗ ಅಲ್ಲಿ ನನ್ನ ಒಂದು ಸಹಿ ಪಡೆದುಕೊಂಡಿರುತ್ತಾರೆ. ನಾನು ಸಹಿ ಮಾಡಿದಾಗ ಬೆಳಿಗ್ಗೆ 9.00 ರಿಂದ 10.15 ಗಂಟೆಯಾಗಿತ್ತು. ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ಗುರುತಿಸಲಾಗುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು 3 ವರ್ಷಗಳ ಹಿಂದೆ ನೋಡಿರುತ್ತೇನೆ, ಆದರೆ ಈಗ ಸರಿಯಾಗಿ ಗುರುತಿಸಲಾಗುವುದಿಲ್ಲ. ನನ್ನ ಸಮಕ್ಷಮ ನ್ಯಾಯಾಲಯದ ಮುಂದಿರುವ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ, ಪಂಚನಾಮೆಗೆ ಸಹಿ ಪಡೆದಿರುತ್ತಾರೆ.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ</u> ಎಪಿಪಿಯವರಿಂದಃ**

ನಿಪಿ-8 ಕ್ಕೆ ದಿ.28-11-2019 ರಂದು ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ದಿನ 3 ಜನ ಆರೋಪಿತರ ಬಳಿ 3 ಬ್ಯಾಗುಗಳು ಇದ್ದವು, ಅವುಗಳನ್ನು ಪೋಲಿಸರು ಜಪ್ತುಪಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ಒಂದು ಬ್ಯಾಗಿನಲ್ಲಿ ಎಂಓ-1 ರಿಂದ 17 ಮುದ್ದೆಮಾಲುಗಳು ಇದ್ದವು ಎಂದರೆ ಗೊತ್ತಿಲ್ಲ. ಆರೋಪಿತರು ಹಿಡಿದುಕೊಂಡ ಬ್ಯಾಗುಗಳು ಈಗ ನ್ಯಾಯಾಲಯದ ಮುಂದಿರುತ್ತವೆ, ಅವುಗಳನ್ನು ನಾನು ಗುರುತಿಸುತ್ತೇನೆ. ಪಂಚನಾಮೆಯನ್ನು 9.30 ರಿಂದ 10.15 ಗಂಟೆಯವರೆಗೆ ಮಾಡಲಾಗಿದೆ ಎಂದರೆ ಸರಿ. ಎಂಓ-1 ರಿಂದ 17 ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ನಿಪಿ-8 ಕ್ಕೆ ಸಹಿ ಮಾಡಿದ್ದನ್ನು ಹೊರತುಪಡಿಸಿ, ಬೇರೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿ. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ-8 ರಲ್ಲಿ ಏನು ಬರೆಯಲಾಗಿದೆ ಎಂದರೆ ಗೊತ್ತಿಲ್ಲ ಎಂದರೆ ಸರಿ. ಮುದ್ದೆಮಾಲುಗಳನ್ನು ಯಾವ ವಿಚಾರವಾಗಿ ಜಪ್ತುಪಡಿಸಿದ್ದಾರೆ ಎಂದರೆ ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

# ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಭಟ್ಕಳ

ಸಿ.ಸಿ. ನಂ.149/2022

ಸಿ.ಡಬ್ಲ್ಯೂ: 4, ಪಿ.ಡಬ್ಲ್ಯೂ: 2

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸುಭಾಷ್ ವೆಂಕಟೇಶ ಮಯೇಕರ್ |
| **ತಂದೆಯ ಹೆಸರು** | : | ವೆಂಕಟೇಶ ಮಯೇಕರ್ |
| **ವಯಸ್ಸು** | : | 63 ವರ್ಷ |
| **ಉದ್ಯೋಗ** | : | ನಿವೃತ್ತ ರೈಲ್ವೇ ಇಲಾಖೆ ಸಿಬ್ಬಂದಿ |
| **ವಾಸ** | : | ಕಾರವಾರ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 27-03-2023**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನಾನು ಸನ್ 1992 ರಿಂದ 2019 ರವರೆಗೆ ಕಾರವಾರ ಆರ್.ಪಿ.ಎಫ್ ವಿಭಾಗದಲ್ಲಿ ಜೀಪ್ ಚಾಲಕನಾಗಿ ಕೆಲಸ ಮಾಡಿದ್ದೇನೆ.

ದಿ.28-11-2019 ರಂದು ನಮ್ಮ ಮೇಲಾಧಿಕಾರಿಗಳಿಗೆ ಕಳ್ಳತನ ಮಾಡಿದ ಆರೋಪಿತರು ಮುರ್ಡೇಶ್ವರದಿಂದ ಕಾರವಾರಕ್ಕೆ ಭಟ್ಕಳ - ಪಣಜಿ ಬಸ್ಸಿನಲ್ಲಿ ಬರುತ್ತಿದ್ದಾರೆ ಎಂದು ಮಾಹಿತಿ ಬಂದಿತ್ತು. ಅದಕ್ಕಾಗಿ ಅವರನ್ನು ಹಿಡಿಯಲು ನಾನು, ಚಾಸಾ-11 ರವರೊಂದಿಗೆ ಜೀಪಿನಲ್ಲಿ ಕಾರವಾರದ ಕೋರ್ಟ್ ಬಂದರು ರಸ್ತೆಯಲ್ಲಿ ಕಾಯುತ್ತಾ ನಿಂತಿದ್ದೆವು. ಸದರಿ ಬಸ್ ಬೆಳಿಗ್ಗೆ 9.30 ಗಂಟೆಗೆ ನಾವು ಇದ್ದಂತಹ ಸ್ಥಳಕ್ಕೆ ಬಂತು. ಆಗ ಸದರಿ ಬಸ್ಸನ್ನು ತಡೆದು ಬಸ್ಸಿನೊಳಗೆ ಹೋಗಿ ಎಲ್ಲಾ ಪ್ರಯಾಣಿಕರಿಗೆ ತಮ್ಮ ತಮ್ಮ ವಸ್ತುಗಳನ್ನು ಕೈಯಲ್ಲಿ ಹಿಡಿದುಕೊಳ್ಳಲು ಹೇಳಿದೆವು. ಎಲ್ಲಾ ಪ್ರಯಾಣಿಕರು ತಪಾಸಣೆ ಮಾಡಲಾಯಿತು. ಬಸ್ಸಿನ 35-36-37 ನೇ ಸೀಟಿನಲ್ಲಿ ಕುಳಿತ 3 ವ್ಯಕ್ತಿಗಳ ಮೇಲೆ ಸಂಶಯ ಬಂದು ಅವರನ್ನು ಪರೀಕ್ಷೆಗೊಳಪಡಿಸಿದಾಗ, ಅವರು ಕುಳಿತುಕೊಂಡ ಸೀಟಿನ ಮೇಲುಗಡೆ ಲಗ್ಗೇಜು ಇಡುವ ಸ್ಥಳದಲ್ಲಿ 3 ಬ್ಯಾಗುಗಳು ಇದ್ದವು. ಸದರಿ 3 ಬ್ಯಾಗುಗಳನ್ನು ತೆಗೆದು ನೋಡಿದಾಗ ಒಂದನೇ ಬ್ಯಾಗಿನಲ್ಲಿ ಬಟ್ಟೆಗಳು ಇದ್ದವು 2 ನೇ ಬ್ಯಾಗಿನಲ್ಲಿ ಬಂಗಾರದ ಆಭರಣಗಳು ಇದ್ದವು. 3 ನೇ ಬ್ಯಾಗಿನಲ್ಲಿ ಏನು ಇತ್ತು ಎಂದು ನಾನು ನೋಡಿರುವುದಿಲ್ಲ. 3 ಜನರನ್ನೂ ನಮ್ಮ ವಶಕ್ಕೆ ಪಡೆದುಕೊಂಡು ಕಾರವಾರದ ಶಹರು

ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ, ಜಪ್ತು ಪಂಚನಾಮೆ ಮಾಡಲಾಯಿತು. ಪಂಚನಾಮೆಯನ್ನು ಬೆಳಿಗ್ಗೆ 9.30 ರಿಂದ 10.30 ರವರೆಗೆ ಮಾಡಲಾಯಿತು. ಸದರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ನಂತರ 3 ಆರೋಪಿತರನ್ನು ಮುರ್ಡೇಶ್ವರದ ಪೋಲಿಸ್ ಠಾಣೆಗೆ ಕರೆದುಕೊಂಡು ಬರಲಾಯಿತು. ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 3 ಬ್ಯಾಗುಗಳು ಅದರಲ್ಲಿರುವ ಬಟ್ಟೆಗಳನ್ನು ನೋಡಿ ಸಾಕ್ಷಿ ಗುರತಿಸಿರುತ್ತಾರೆ. ಅವುಗಳನ್ನು ಎಂಓ–9 ರಿಂದ 11 ಎಂದು ಗುರುತಿಸಲಾಯಿತು. 1 ಬ್ಯಾಗಿನಲ್ಲಿದ್ದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ನಾಣ್ಯಗಳು, ಹಣ, 3 ಮೊಬೈಲು, ಆಧಾರ ಕಾರ್ಡು, ಒಂದು ಖಾಲಿ ಸ್ಟೀಲ್ ಡಬ್ಬ, ಒಂದು ಪರ್ಸ್, ಮತ್ತು ಬಸ್ ಟಿಕೇಟು, ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಚಾಸಾ–1 ರವರು ಹಾಜರುಪಡಿಸಿದ ಬಂಗಾರದ ಆಭರಣಗಳನ್ನು ನೋಡಿ ಗುರುತಿಸಿರುತ್ತಾರೆ. ಈಗಾಗಲೇ ಹಣ ಮತ್ತು ನಾಣ್ಯಗಳನ್ನು ಮತ್ತು ಚಾಸಾ–1 ರವರು ಹಾಜರುಪಡಿಸಿದ ಆಭರಣ ಮತ್ತು ಮೋಬೈಲನ್ನು ಕ್ರಮವಾಗಿ ಎಂಓ–1 ರಿಂದ 8 ಎಂದು ಗುರುತಿಸಲಾಗಿದೆ. 3 ಮೊಬೈಲುಗಳನ್ನು ನಿಪಿ–9 ರಿಂದ 11 ಎಂದು, ಒಂದು ರೂ. 1,121/– ಹಣವಿರುವ ಪರ್ಸ್ ನ್ನು ಎಂಓ–12 ಎಂದು, ಒಂದು ಖಾಲಿ ಸ್ಟೀಲ್ ಡಬ್ಬವನ್ನು ಎಂಓ–13, ಆಧಾರ ಕಾರ್ಡ್ ಮತ್ತು ಬಸ್ ಟಿಕೇಟನ್ನು ಎಂಓ–14 ಎಂದು, ಅದೇ ರೀತಿ ಆಧಾರ ಕಾರ್ಡ್ ಮತ್ತು ನಾಣ್ಯವಿರುವ ವಸ್ತುಗಳನ್ನು ಎಂಓ–15 ಎಂದು, ಮತ್ತು 2 ಪ್ಲಾಸ್ಟಿಕ್ ಕವರಿನಲ್ಲಿದ್ದ ರೂ.34/–, ಮತ್ತು ರೂ.44/– ನಾಣ್ಯಗಳನ್ನು ಎಂಓ–16 ಮತ್ತು 17 ಎಂದು ಗುರುತಿಸಲಾಯಿತು. ಸದರಿ ದಿನ ದಸ್ತಗಿರಿ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪ್ರಕರಣದಲ್ಲಿ 1 ಮತ್ತು 3 ನೇ ಆರೋಪಿತರನ್ನು ಸ್ಟಿಟ್ ಅಪ್ ಮಾಡಲಾಗಿದೆ.

**<u>ಪಾಟೀ ಸವಾಲುಃ</u>  ಆರೋಪಿ ಪರ ಶ್ರೀ ಆರ್.ಜಿ.ಎನ್ ವಕೀಲರಿಂದಃ**

ಆರೋಪಿತರು 35 ರಿಂದ 37 ನೇ ಬಸ್ಸಿನ ಸೀಟಿನಲ್ಲಿ ಕುಳಿತಿರುವುದನ್ನು ನಾನು ನೋಡಿರುತ್ತೇನೆ. ಆದರೆ ಬಸ್ಸಿನ ಟಿಕೇಟು ನೋಡಿರುವುದಿಲ್ಲ. ಬ್ಯಾಗುಗಳನ್ನು ಚಾಸಾ–11 ರವರು ತಪಾಸಣೆ ಮಾಡಿರುತ್ತಾರೆ. ಬ್ಯಾಗುಗಳನ್ನು ಗುರುತಿಸಲು ಯಾವುದೇ ಮಾರ್ಕ್ ಮಾಡಿರುವುದಿಲ್ಲ, ಆದರೆ ಅವುಗಳನ್ನು ನಾನು ಗುರುತಿಸುತ್ತೇನೆ, ಅವುಗಳು ಈಗ ನ್ಯಾಯಾಲಯದ ಮುಂದಿರುತ್ತವೆ. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಕನ್ನಡ, ಇಂಗ್ಲೀಷ್, ಮರಾಠಿ, ಹಿಂದಿ ಭಾಷೆ ಮಾತನಾಡಲು ಬರುತ್ತದೆ. ಇಂಗ್ಲೀಷ್ ಸ್ವಲ್ಪ ಓದಲು ಬರುತ್ತದೆ. ಜಪ್ತು ಪಂಚನಾಮೆಗೆ ಮತ್ತು

ವಶಪಡಿಸಿಕೊಂಡ ಮುದ್ದೆಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಹಿಡಿದ ಸ್ಥಳವಾದ ಬಸ್ಸಿನಲ್ಲಿ ಜಪ್ತುಪಂಚನಾಮೆ ಮಾಡಿಲ್ಲ ಎಂದರೆ ಸರಿ. ಬಸ್ಸಿನಲ್ಲಿ ಜಪ್ತು ಮಾಡುವಾಗ ನನ್ನೊಂದಿಗೆ ಸಹಾಯಕ ಆಯುಕ್ತರು, ಚಾಸಾ-11 , ಚಾಸಾ-13 ಇದ್ದರು. ಜಪ್ತುಪಂಚನಾಮೆ ಮಾಡುವಾಗ ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ. ಪಂಚನಾಮೆ ಮಾಡಲು ಮಾಹಿತಿ ನಾನು ಕೊಟ್ಟಿರುವುದಿಲ್ಲ, ಸಹಿ ಮಾಡಿರುತ್ತೇನೆ, ನನಗೆ ಇಂಗ್ಲೀಷ್ ಓದಲು, ಬರೆಯಲು ಬರುವುದಿಲ್ಲ, ಅದಕ್ಕಾಗಿ ಜಪ್ತು ಪಂಚನಾಮೆ ಇಂಗ್ಲೀಷ್ ನಲ್ಲಿದ್ದು, ಅದರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಗೊತ್ತಾಗುತ್ತದೆ ಎನ್ನುತ್ತಾರೆ, ಸುಳ್ಳು ಬರೆದ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

ಸಿ.ಸಿ. ನಂ.149/2022
ಸಿ.ಡಬ್ಲ್ಯೂಃ1, ಪಿ.ಡಬ್ಲ್ಯೂಃ 1
ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ತಾಃ 27–03–2023

**ಮುಂದುವರಿದ ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ,**

ನನಗೆ ಸೇರಿದ ಬಂಗಾರದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ದಿನ ಆದೇಶದಂತೆ ತನ್ನ ಸಾಧೀನದಲ್ಲಿರುವ 4 ಬಂಗಾರದ ಬಳೆಗಳು, 1 ಜೊತೆ ಕಿವಿ ಓಲೆ, 1 ಚೈನು, 1 ಉಂಗುರ, 1 ಮಾಂಗಲ್ಯ ಸರ ಮತ್ತು 1 ಮೊಬೈಲು ಹಾಜರುಪಡಿಸಿದ್ದು, ಅವುಗಳನ್ನು ಗುರುತಿಸಿರುತ್ತಾರೆ. ಆದ್ದರಿಂದ ಅವುಗಳನ್ನು ಎಂಒ–2 ರಿಂದ 7 ಎಂದು ಗುರುತಿಸಲಾಯಿತು. ಸದರಿ ಮುದ್ದೆ ಮಾಲುಗಳನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು. ಅದೇ ದಿನ ಪೋಲಿಸರು ರೈಲ್ವೇ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ಘಟನಾ ಸ್ಥಳದಲ್ಲಿ 4.30 ರಿಂದ 5.30 ರವರೆಗೆ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ಫೋಟೋ ಮತ್ತು ನಕ್ಷೆ ತೆಗೆಯಲಾಯಿತು. ಸದರಿ ಪಂಚನಾಮೆಯ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ನಕ್ಷೆಯನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ–4 ಎಂದು ಗುರುತಿಸಲಾಯಿತು. ದಿ.29–11–2019 ರಂದು ಪೋಲಿಸರು ಆರೋಪಿ ತೋರಿಸಿದ ಸ್ಥಳದಲ್ಲಿ ಸಂಜೆ 5.00 ಗಂಟೆಯಿಂದ 6.00 ಗಂಟೆಯವರೆಗೆ ಪಂಚನಾಮೆ ಬರೆದು ಫೋಟೊ ತೆಗೆಯಲಾಯಿತು. ಸದರಿ ನೋಡುತ್ತಿದ್ದು, ಅದನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ–6 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಠಾಣೆಗೆ ಹೋಗಿ ಮರುಹೇಳಿಕೆ ನೀಡಿರುತ್ತೇನೆ. ಮರುಹೇಳಿಕೆಯ ಸಮಯದಲ್ಲಿ ಆರೋಪಿಯನ್ನು ಗುರುತಿಸಿ ಮರುಹೇಳಿಕೆ ನೀಡಿರುತ್ತೇನೆ. ದಿ.27–12–2019 ರಂದು ನ್ಯಾಯಾಲಯದ ಮುಂದೆ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನೋಡುತ್ತಿದ್ದು, ನಿಪಿ–7 ಎಂದು, ಸಾಕ್ಷಿಯ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಿನ 5 ರೂಪಾಯಿಯ 38 ನಾಣ್ಯಗಳು ಕಳೆದುಹೋಗಿದ್ದು, ಅವುಗಳು ಈಗ ನ್ಯಾಯಾಲಯದ ಮುಂದೆ ಇದ್ದು, ಅವುಗಳನ್ನು ನಾನು ಗುರುತಿಸಿರುತ್ತೇನೆ. ಅವುಗಳನ್ನು ಎಂಒ–8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>   ಆರೋಪಿ ಪರ ಶ್ರೀ ಆರ್.ಜಿ.ಎನ್  ವಕೀಲರಿಂದಃ**

ಘಟನೆಯಾದ ದಿನ ನಾನು ತಾಯಿಯ ಮನೆ ಉಡುಪಿಗೆ ಹೋಗಿ ಮಾರನೇ ದಿನ ಭಟ್ಕಳಕ್ಕೆ ಬಂದಿರುತ್ತೇನೆ ಅಂದರೆ ದಿ.29-11-2019 ರಂದು ಭಟ್ಕಳಕ್ಕೆ ಬಂದು ದೂರು ನೀಡಿರುತ್ತೇನೆ. ಪಿರ್ಯಾದಿಯನ್ನು ಪೋಲಿಸರು ಬರೆದಿರುತ್ತಾರೆ. ಆದರೆ ಪಿರ್ಯಾದಿ ಬರೆದ ಪೋಲಿಸರ ಹೆಸರು ನನಗೆ ಹೇಳಲು ಬರುವುದಿಲ್ಲ. ಘಟನೆಯಾದಾಗ ಸ್ವಲ್ಪ ಕತ್ತಲೆಯಾಗಿತ್ತು ಎಂದರೆ ಸರಿ. ಸ್ವಲ್ಪ ಕತ್ತಲು ಆಗಿರುವುದರಿಂದ ನನ್ನ ಬ್ಯಾಗ್ ಯಾರು ಕಳ್ಳತನ ಮಾಡಿದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಪಂಚನಾಮೆ ಬರೆಯಲು ಪೋಲಿಸರಿಗೆ ನಾನು ಮಾಹಿತಿ ನೀಡಿರುವುದಿಲ್ಲ. ಪಂಚರನ್ನು ಯಾರು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ. ಆಭರಣಗಳನ್ನು ಜಪ್ತು ಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೊಲಿಸರು ನನಗೆ ಆಭರಣಗಳನ್ನು ತೋರಿಸಿದರು. ಅದರಲ್ಲಿ ನಾನು ನನ್ನ ಆಭರಣಗಳನ್ನು ಗುರುತಿಸಿಕೊಂಡು ಪಡೆದಿರುತ್ತೇನೆ. ಪೋಲಿಸ್ ಠಾಣೆಯಲ್ಲಿ ಒಟ್ಟು ಎಷ್ಟು ಸಹಿಗಳನ್ನು ಹಾಕಿದ್ದೇನೆ ಎಂದು ನನಗೆ ನೆನಪಿಲ್ಲ. ನನಗೆ ಸಂಬಂಧಿಸಿದ ಆಭರಣಗಳ ರಶೀದಿಗಳು ನನ್ನ ಬಳಿ ಇರುವುದಿಲ್ಲ. ಏಕೆಂದರೆ ಅವುಗಳನ್ನು ನಾನು ಸನ್ 2004 ರಲ್ಲಿ ಖರೀದಿ ಮಾಡಲಾಗಿತ್ತು. ಚಿನ್ನ ತೂಕ ಮಾಡಿ ಅಕ್ಕಸಾಲಿಗನ ವಿವರ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತನ ಹೆಸರು ನನಗೆ ಹೇಳಲು ಬರುವುದಿಲ್ಲ. ಪ್ರಕರಣಕ್ಕೂ, ಮುದ್ದೆಮಾಲಿಗೂ, ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪೋಲಿಸರು ತಯಾರಿಸಿದ ನಕ್ಷೆಯಲ್ಲಿರುವ ವಿವರ ನನಗೆ ಹೇಳಲು ಬರುವುದಿಲ್ಲ. ಪ್ರಕರಣ ದಾಖಲಿಸಿದ ನಂತರ ಭಟ್ಕಳ ಪೋಲಿಸ್ ಠಾಣೆಗೆ ಸುಮಾರು 3 ರಿಂದ 4 ಬಾರಿ ಹೋಗಿರುತ್ತೇನೆ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**